ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue 3, November-December 2024, Pp. 78-86**
**©*IIMRD*, Mysuru**

IIMRD JOURNALS

**www.iimrd.com**

# ಕ್ಯಾತನಹಳ್ಳಿ: ಲಕ್ಷ್ಮೀಕಾಂತೇಶ್ವರ ದೇವಾಲಯದ ಶಾಸನಗಳು

**ಮಹೇಶ್‌ಕುಮಾರ್ ಕೆ.ಎಸ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸಾರಾಂಶ: (Abstract)**

*ಇತಿಹಾಸ ರಚನೆಯಲ್ಲಿ ಶಾಸನಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ನಮ್ಮ ದೇಶದ ಇತಿಹಾಸ ಸ್ವರೂಪಕ್ಕೆ ಶಾಸನಗಳೇ ಜೀವನಾಡಿ. ಭಾರತೀಯರ ಜೀವನ ಮತ್ತು ಆಲೋಚನೆಗಳ ಮೇಲೆ ಇವು ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ. ಭರತಖಂಡದಲ್ಲಿ ಅಸಂಖ್ಯಾತ ಶಾಸನಗಳು ದೊರೆಯುತ್ತವೆ. ಅದರಲ್ಲೂ ಕರ್ನಾಟಕದಲ್ಲಿ ಹೇರಳವಾಗಿ ಸಿಗುತ್ತವೆ. ಇಲ್ಲಿ ಶಾಸನಗಳಿರದ ಹಳ್ಳಿಗಳಿಲ್ಲ ಎಂದೇ ಹೇಳಬಹುದು. ಬಹುಕಾಲ ಉಳಿಯುವಂತಹ ಸಾಮಗ್ರಿಗಳಾದ ಶಿಲೆ, ಲೋಹ ಇತ್ಯಾದಿಗಳ ಮೇಲೆ ಬರೆದಿರುವ ಬರಹಗಳನ್ನು ಶಾಸನಗಳೆಂದು ಸ್ಥೂಲವಾಗಿ ಕರೆಯಬಹುದು. 'ಶಾಸನ' ಎಂಬ ಪದದ ಮೂಲಾರ್ಥ 'ಆಜ್ಞೆ' ಎಂಬುದಾಗಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಲಾಗಿದೆ. 'ಶಾಸನ' ಎಂಬ ಪದವು ಸಂಸ್ಕೃತದ 'ಶಾಸ್' ಎಂಬ ಧಾತುವಿನಿಂದ ಬಂದಿದೆ. ಅಂದರೆ ಅಪ್ಪಣೆ ಮಾಡು, ನಿಯಂತ್ರಿಸು, ಶಿಕ್ಷಿಸು ಎನ್ನುವ ಅರ್ಥವನ್ನು ಕೊಡುತ್ತದೆ. ಪ್ರಸ್ತುತ ಲೇಖನದಲ್ಲಿ ಕ್ಯಾತನಹಳ್ಳಿ ಗ್ರಾಮದ ಲಕ್ಷ್ಮೀಕಾಂತೇಶ್ವರ ದೇವಾಲಯದ ಶಾಸನಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಕನ್ನಡ ಶಾಸನಗಳು, ಕ್ಯಾತನಹಳ್ಳಿ, ಲಕ್ಷ್ಮೀಕಾಂತೇಶ್ವರ ದೇವಾಲಯ.

**ಪೀಠಿಕೆ**

ಶಾಸನಗಳಲ್ಲಿ ಬಹಳ ಮುಖ್ಯವಾಗಿ ಎರಡು ಪ್ರಕಾರಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಮೊದಲನೆಯ ಪ್ರಕಾರಕ್ಕೆ ಸೇರಿದವು ವೀರಶಾಸನಗಳು. ತಮ್ಮ ಪೋಷಕರ ಅಥವಾ ಊರಿನ ಪರವಾಗಿ ಯುದ್ಧದಲ್ಲಿ ಹೋರಾಡಿ ಮಡಿದವರ, ಕಳ್ಳರು ಬಂದು ತುರುಗಳನ್ನು ಅಪಹರಿಸಿದಾಗ ಹೋರಾಡಿ ಪ್ರಾಣಬಿಟ್ಟವರ ಅಥವಾ ಗೆದ್ದು ಹಿಂದಕ್ಕೆ ಬಂದವರ ಪ್ರಶಸ್ತಿ ರೂಪವಾದ ಶಾಸನಗಳೇ ವೀರಶಾಸನಗಳು. ಇವುಗಳನ್ನು ವೀರಗಲ್ಲುಗಳೆಂದೂ ಕರೆಯಲಾಗುತ್ತದೆ. ಎರಡನೇ ಪ್ರಕಾರದಲ್ಲಿ ದಾನ ಶಾಸನಗಳು ಕಂಡುಬರುತ್ತವೆ. ದಾನಶಾಸನಗಳು ಮುಖ್ಯವಾಗಿ ದೇವಸ್ಥಾನಗಳಿಗೆ, ಮಠಗಳಿಗೆ, ವಿದ್ವಾಂಸರಿಗೆ, ಗುರುಗಳಿಗೆ ಸಾರೋದ್ಧಾರವಾಗಿ ನಡೆಯಲೆಂದು ಹೊಲವನ್ನೋ, ಹಣವನ್ನೋ, ಮನೆಯನ್ನೋ, ಆದಾಯದ ಒಂದು

*Please cite this article as:* ಮಹೇಶ್‌ಕುಮಾರ್, ಕೆ.ಎಸ್. (2024). ಕ್ಯಾತನಹಳ್ಳಿ: ಲಕ್ಷ್ಮೀಕಾಂತೇಶ್ವರ ದೇವಾಲಯದ ಶಾಸನಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 78–86

ಭಾಗವನ್ನೋ ಬಿಟ್ಟುಕೊಟ್ಟ ವಿಷಯವನ್ನು ಹೇಳುವ ಶಾಸನಗಳಾಗಿರುತ್ತವೆ. ಇವು ತಾಮ್ರಪಟ ಶಾಸನಗಳಾಗಿಯೂ ಇರಬಹುದು ಅಥವಾ ಶಿಲಾಶಾಸನಗಳಾಗಿಯೂ ಇದ್ದಿರಬಹುದು. ಇಂತಹ ಶಾಸನಗಳು ಸಾಮಾನ್ಯವಾಗಿ ದೇವಾಲಯದ ವಿವಿಧ ಭಾಗಗಳಲ್ಲಿಯೂ ಗೋಡೆ, ಕಂಬ, ಅಸ್ತಿಭಾರ, ಬಾಗಿಲು, ಚಾವಣಿ, ಬೋದಿಗೆ ಮುಂತಾದ ಕಡೆಗಳಲ್ಲಿಯೂ ಪ್ರತ್ಯೇಕವಾಗಿ ತಯಾರಿಸಿ ನಿಲ್ಲಿಸಿದ ಶಿಲಾಫಲಕಗಳ ಮೇಲೆಯೂ ಕೆತ್ತಲ್ಪಟ್ಟಿರುತ್ತವೆ.

ಕ್ಯಾತನಹಳ್ಳಿಯ ಲಕ್ಷ್ಮೀಕಾಂತೇಶ್ವರ ದೇವಾಲಯದ ರಂಗಮಂಟಪದ ಕಂಬದ ಬುಡದಲ್ಲಿ ದೊರೆತ ಎರಡು ಶಾಸನಗಳು ದಾನ ಶಾಸನಗಳಾಗಿದ್ದು, ಇವು ಅಂದಿನ ಕಾಲದಲ್ಲಿ ಆಳ್ವಿಕೆ ಮಾಡುತ್ತಿದ್ದ ರಾಜರೂ ಅವರ ಪರಿವಾರದವರೂ ನಿರ್ಮಿಸಿದ ದೇವಾಲಯಗಳ ಪೂಜೆಪುರಸ್ಕಾರಗಳಿಗೂ ಜೀರ್ಣೋದ್ಧಾರಕ್ಕು ಬಿಟ್ಟ ದತ್ತಿಗಳ ವಿವರಗಳನ್ನು ತಿಳಿಸುವ ಮಹತ್ವದ ದಾಖಲೆಗಳಾಗಿವೆ. ಅಷ್ಟೇ ಅಲ್ಲದೆ ಇವು ಅಂದಿನ ರಾಜ ವಂಶಸ್ಥರು, ಅವರು ಆಳ್ವಿಕೆ ನಡೆಸುತ್ತಿದ್ದ ಕಾಲಮಾನ, ಊರಿನ ಚರಿತ್ರೆ, ಅವರ ಆಡಳಿತ ವ್ಯವಸ್ಥೆ, ಸಾಮಾಜಿಕ ಮತ್ತು ಧಾರ್ಮಿಕ ಮನೋಭಾವ ಇತ್ಯಾದಿ ವಿಷಯಗಳನ್ನು ತಿಳಿಯಲು ಸಹಕಾರಿಯಾಗಿದೆ.

ಇಂತಹ ಶಾಸನಗಳನ್ನು ಹಾಕಿಸಿರುವುದರ ಹಿಂದೆ ಅನೇಕ ಮಹತ್ವದ ಉದ್ದೇಶಗಳು ಮತ್ತು ಕಾರಣಗಳು ಇದ್ದಂತೆ ಕಂಡುಬರುತ್ತದೆ. ಮುಖ್ಯವಾಗಿ ದಾನವನ್ನು ಕೊಡುವ ವ್ಯಕ್ತಿಯ ಉದಾರದೃಷ್ಟಿ. ತಾನು ಕೊಟ್ಟಿರುವ ದಾನವು ಇಷ್ಟಕ್ಕೆ ನಿಲ್ಲಬಾರದು ದಾನವನ್ನು ಸ್ವೀಕರಿಸುವವನ ಮಕ್ಕಳು ಮೊಮ್ಮಕ್ಕಳು ಕಾಲಕಾಲಕ್ಕು ಅನುಭವಿಸಿಕೊಂಡು ಬರಬೇಕು ಎಂಬ ಪ್ರಬಲ ಆಕಾಂಕ್ಷೆ ಹಾಗೂ ತನ್ನ ಹೆಸರು ಶಾಶ್ವತವಾಗಿ ನಿಲ್ಲಬೇಕೆಂಬ ಮಾನವ ಸಹಜವಾದ ಪ್ರವೃತ್ತಿಯೂ ಶಾಸನ ನಿರ್ಮಾಣಕ್ಕೆ ಪ್ರಚೋದನೆಯನ್ನು ನೀಡಿರಬೇಕು.

**ಶಾಸನ ಪಾಠ ಹೀಗಿದೆ:**

**ದಕ್ಷಿಣ ಮುಖ**

***ಸ್ವಸ್ತಿ ಶ್ರೀಸಕನಕಾಲ ಸಾವಿರದಎಂಬ***
***ತಆಱನೆಯ ದುಂದುಭಿಸಂವಛರದಲಿ***
***ತಗಡೂರ ಕೊವರಕೇತಗೌಂಡ ಬಂದು ಆರಿದ***
***ವಾಳಿಕೆಯ ಕೇತನಹಳಿಯ ಮಾಡಿ ಮಲಿನಾತ***
***ದೇವರ ದೇವಾಲಯ ಸಹಿತ ಹೊಸಕೆಱೆಯ ಕ***
***ಟಿಸಿದನು ಆತನ ಮಗ ಹೊಯಿಸಳಗೌಂಡನು ಲ***
***ಕ್ಷುಮಿನಾರಣದೇವರು ಸಹಿತಲೂ ಯಿ ಮಂಟ***
***ಪವ ಮಾಡಿಸಿ ಪ್ರತಿಷ್ಠೆಯಿಲ್ಲದೆ ಯಿದುತು ಯಿದ್ದ***
***ಬಳಿಕ ನೂಱಯ್ಯೆವತವೊಂಭತನೆಯ ದುಂ***
***ದುಭಿಸಂವತ್ಸರದ ಮಾರ್ಗಸಿರ ಬಹುಳ ಏ***

*ಕಾದಸಿ ಸನಿವಾರದಂದು ಚೋಳದೇವನ ಮಗ ಅಂಕ*

*ಪ ಮಾಚಿದೇವನ ಮಗ ಚೊಕಂಣ್ಣ ಜೀಯಗೌಡನ ಮ*

*ಗ ಅಂಕಪ ಹೊಯ್ಸಗೌಂಡನ ಮಗ ದೇವಂಣ್ಣನೊ*

*ಳಗಾದ ಸಮಸ್ತ ಪ್ರಭುಗಳೆಲ್ಲರೂ ಕೂಡಿ*

**ಪೂರ್ವಮುಖ**

*ಪ್ರತಿಷ್ಟೆಯಂ ಮಾಡಿ ಗದೆ ಬೆದಲಂ ಬಿಟ್ಟು ಸೂ*

*ರಿಯಾ ದೇವಂಗೆ ಯಿಸ್ತಾನವನು ಧಾರಾಪೂರ್ಬ್ಬಂ ಮಾ*

*ಡಿಕೊಟ್ಟು ಶ್ರೀಕಾರಿಯವ ನಡೆಸಿದರು ಮಂ*

*ಗಳ ಮಹಾ*

*ಧರವತಿಯಂ*

*ದದಿ ತಾರುಸಿ*

*ದು. ನಿದರು*

ಅದೇ ದೇವಸ್ಥಾನದ ರಂಗಮಂಟಪದ ಆಗ್ನೇಯ ಕಂಬದ ಬುಡದಲ್ಲಿ

*ಶ್ರೀಮನು ಮಹಾ ಮುವರು*

*ರಾಯರಗಂಡ ಶ್ರೀಮಥ್*

*ತಿಂಮಣನಾಯ್ಕರ ಮನೆಯ*

*ಅಕಸಾಲೆ ಮಾರತಂಮನು ಮಲ್ಲಿ*

*ದೇವರಿಗೆ ಬಿಟ್ಟ ಚನಿಗಾಬಿರ ವೊಕಲು*

*1 ಲಕ್ಷುಮಿನಾಥದೇವರಿಗೆ ವೊ*

*ಕಲು 1 ಯಿ ಧರ್ಮ್ಮವ ಆಳಿದವರು*

*ಗೋವ ಕೊಂದವರು*

*ತಾರಣ ಸಂವತ್ಸ . ಚಯಿತ್ರ ಸು 1 ಉ*

*ಆ . ಬಾಳ ಅಕಸಾಲೆವಾಲು . . . . .*

**ಶಾಸನ ಪಾಠದ ಸಾರಾಂಶ**

ಭಾರತೀಯರ ಪ್ರಕಾರ ಯಾವ ಕೃತಿಯೇ ಆಗಲಿ ಮಂಗಳ ಶ್ಲೋಕದಿಂದ ಅಥವಾ ಮಂಗಳ ವಾಚಕದಿಂದ ಆರಂಭವಾಗಬೇಕು. ಪ್ರಾಚೀನ ಕನ್ನಡ ಶಾಸನಗಳಲ್ಲಿ ಕೆಲವು ಶಾಸನಗಳು ಪ್ರಾರ್ಥನಾ

ಶ್ಲೋಕದಿಂದ ಆರಂಭವಾಗಿರುವುದನ್ನು ಕಾಣಬಹುದು. ಉದಾಹರಣೆ: ಹಲ್ಮಿಡಿ ಶಾಸನ. ಇನ್ನೂ ಕೆಲವು ಶಾಸನಗಳ ಆರಂಭದಲ್ಲಿ ಮೇಲ್ಕಂಡ ಶಾಸನದ ಆರಂಭದಲ್ಲಿ ಉಕ್ತವಾಗಿರುವ ಸ್ವಸ್ತಿಶ್ರೀ ಎಂಬ ಮಂಗಳ ವಾಚಕ ಶಬ್ದ ಇರುವುದನ್ನು ಕಾಣಬಹುದು.

ಮಂಗಳ ವಾಚಕ ಶಬ್ದದ ಬಳಿಕ ದಾನವನ್ನು ಕೊಟ್ಟ ಕಾಲದ ವಿಷಯವನ್ನು ನಿರ್ದೇಶನ ಮಾಡಲಾಗಿದೆ. **"ಸಕನ ಕಾಲ ಸಾವಿರದ ಎಂಬತಾಆಱನೆಯ ದುಂದುಭಿ ಸಂವಛರದಲಿ"** ಎಂದು ಶಾಸನ ಪಾಠದಲ್ಲಿ ಕಾಲದ ವಿಚಾರವು ಉಕ್ತವಾಗಿದೆ. ಭರತಖಂಡದಲ್ಲಿ ಎರಡು ಶಕಗಳು ಪ್ರಸಿದ್ಧವಾಗಿವೆ. ಒಂದು ವಿಕ್ರಮಶಕ ಮತ್ತು ಶಾಲಿವಾಹನ ಶಕ. ಕ್ರಿ.ಶ.78 ರಲ್ಲಿ ಶಾಲಿವಾಹನ ಅಥವಾ ಶಕವರ್ಷವನ್ನು ಶಾತವಾಹನ ವಂಶದ ರಾಜನಾದ ಗೌತಮೀಪುತ್ರ ಶಾತಕರ್ಣಿಯು ಶಕರನ್ನು ಸೋಲಿಸಿದ ವಿಜಯದ ಸಂಕೇತವಾಗಿ ಆರಂಭಿಸಿದನೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ ಶಕವರ್ಷಕ್ಕೆ 78ನ್ನು ಸೇರಿಸಿದರೆ ಕ್ರಿಸ್ತಶಕ ದೊರೆಯುತ್ತದೆ. ಅದರಂತೆ ಈ ಶಾಸನದ ಕಾಲಮಾನ ಕ್ರಿ.ಶ.1164 ಎಂದು ನಿರ್ಧರಿಸಬಹುದು.

ಒಂದೇ ಶಾಸನದಲ್ಲಿ ಬೇರೆ ಬೇರೆ ಕಾಲಗಳಲ್ಲಿ ನಡೆದ ಘಟನೆಗಳನ್ನು ನಿರೂಪಿಸಿರಬಹುದು. ಅಂತಹ ಕಡೆ ಸಾಮಾನ್ಯವಾಗಿ ಆ ಬೇರೆ ಬೇರೆ ಕಾಲಗಳನ್ನು ಸ್ಪಷ್ಟವಾಗಿ ನಿರೂಪಿಸುವುದುಂಟು. ಉದಾಹರಣೆಗೆ ಮೇಲಿನ ಶಾಸನವೊಂದರಲ್ಲೇ ಕ್ರಿ.ಶ.1164ರಲ್ಲಿ ತಗಡೂರ ಕೇತಗೊಂಡನು ಮಲ್ಲಿನಾಥ ದೇವರ ದೇವಾಲಯ ಸಹಿತ ಹೊಸಕೆರೆಯೊಂದನ್ನು ಕಟ್ಟಿಸಿದ ವಿಷಯಗಳೂ, ಕ್ರಿ.ಶ.1322 ರಲ್ಲಿ ಅದೇ ದೇವಸ್ಥಾನವನ್ನು ಸಮಸ್ತ ಪ್ರಭುಗಳೆಲ್ಲರೂ ಸೇರಿ ಪ್ರತಿಷ್ಠೆ ಮಾಡಿ, ಗದ್ದೆ ಹೊಲಗಳನ್ನು ದಾನ ಕೊಟ್ಟ ವಿಷಯಗಳೂ ಬಂದಿವೆ. ಹೀಗೆ ಕಾಲವನ್ನು ನಿರ್ಣಯಿಸುವ ಶಾಸನದ ಈ ಭಾಗವು ಇತಿಹಾಸ ನಿರ್ಮಾಣಕ್ಕೆ ಅತ್ಯಂತ ಅವಶ್ಯಕ.

ದತ್ತಿ ಕಾಲದ ಬಳಿಕ **"ತಗಡೂರ ಕೊವರ ಕೇತಗೌಂಡ ಬಂದು ಆರಿದವಾಳಿಕೆಯ ಕೇತನಹಳಿಯ ಮಾಡಿ"** ಎಂದು ಊರಿನ ನಿರ್ಮಾಣಕ್ಕೂ, ದೇವಾಲಯ ನಿರ್ಮಾಣಕ್ಕೂ ಕಾರಣಪುರುಷನಾದ ಕೇತಗೌಂಡನ ಹೆಸರು ಶಾಸನಪಾಠದಲ್ಲಿ ಉಕ್ತವಾಗಿದೆ. ಈತ ಇಂದಿನ ನಂಜನಗೂಡು ತಾಲೂಕಿನ ತಗಡೂರಿನಲ್ಲಿ ಆಡಳಿತವನ್ನು ನಡೆಸುತ್ತಿದ್ದು ಈ ಪ್ರದೇಶಕ್ಕೆ ಬಂದು ಆರಿದವಾಳಿಕೆಯ ಕೇತನಹಳ್ಳಿ ಎಂದು ಮಾಡಿದನೆಂದು ಶಾಸನ ಹೇಳುತ್ತದೆ. ಹೆಚ್.ಡಿ.ಕೋಟೆ ತಾಲೂಕಿನ ಬೆಳತೂರಿನ ಮಲ್ಲೇಶ್ವರ ಗುಡಿಯೊಳಗೆ ನೆಟ್ಟ ಕಲ್ಲಿನಲ್ಲಿ ಹಾಕಿಸಿರುವ ಶಾಸನದಲ್ಲಿ **"ಆರಿದವಾಳಿಕೆಯ ಕೇತನಹಳಿ ಬಿಮಗವುಡನ ಮಗ ಕೇತಗಉಡ"** ಎಂದು ಉಕ್ತವಾಗಿದ್ದು, ಇದರಿಂದ ಬಿಮಗೌಡನ ಮಗನಾದ ಕೇತಗೌಡನು ಕ್ರಿ.ಶ.1176ರ ಕಾಲಘಟ್ಟದಲ್ಲಿ ಕಣ್ಣಾನೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಹೊಯ್ಸಳ ದೊರೆ ವೀರಸೋಮೇಶ್ವರದೇವನ ದಂಡನಾಯಕನಾಗಿದ್ದನೆಂದೂ ಆರಿದವಾಳಿಕೆಯಾದ ಕೇತನಹಳ್ಳಿ ಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನೆಂದೂ ತಿಳಿಯಲು ನೆರವಾಗಿದೆ.

ಈ ಶಾಸನವು ಐತಿಹಾಸಿಕ ಹಿನ್ನೆಲೆಯಲ್ಲಿ ಸ್ಥಳನಾಮ ವಿವೇಚಿಸಲು ಉತ್ತಮ ಆಧಾರವಾಗಿದೆ. ಕೇತಗೌಂಡನಿಂದ ನಿರ್ಮಾಣವಾದ ಕೇತನಹಳ್ಳಿಯು ಕಾಲಾನಂತರದಲ್ಲಿ ಜನರ ಬಾಯಲ್ಲಿ ಕ್ಯಾತನಹಳ್ಳಿ ಎಂಬುದಾಗಿ ಬಳಕೆಯಾಗಿ ಪ್ರಸ್ತುತ ಅದೇ ಹೆಸರು ಚಾಲ್ತಿಯಲ್ಲಿದೆ.

ಈ ಶಾಸನವು ದಾನದತ್ತಿಯ ವಿಷಯವನ್ನು ಪ್ರಸ್ತಾಪಿಸಿರುವುದಲ್ಲದೆ ಆ ಕಾಲದ ಹೊಯ್ಸಳ ರಾಜಮನೆತನದ ಆಡಳಿತ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುತ್ತದೆ. ಇಲ್ಲಿನ ಶಾಸನ ಪಾಠದಲ್ಲಿ 'ಕೊವರ ಕೇತಗೌಂಡ' ಎಂಬ ಪದ ಬಳಕೆಯಾಗಿದೆ. ಹೊಯ್ಸಳರು ತಮ್ಮ ಆಳ್ವಿಕೆಯ ಕಾಲದಲ್ಲಿ ಯುವರಾಜನನ್ನು ಕುಮಾರ/ಕೊವರ ಎಂದು ಕರೆಯುತ್ತಿದ್ದದ್ದು ಕಂಡುಬರುತ್ತದೆ. ರಾಜಕುಮಾರರು ಮುಂದೆ ರಾಜರಾಗಬೇಕಾಗಿರುವುದರಿಂದ ಅವರು ಆಳ್ವಿಕೆಯ ವಿಷಯದಲ್ಲಿ ಅನುಭವವನ್ನು ಪಡೆಯಲೆಂಬ ಉದ್ದೇಶದಿಂದ ಅವರನ್ನು ರಾಜನು ರಾಜ್ಯದ ಬೇರೆ ಬೇರೆ ಭಾಗಗಳಿಗೆ ಅಧಿಪತಿಗಳನ್ನಾಗಿ ಮಾಡುತ್ತಿದ್ದನು. ಈ ನಿಟ್ಟಿನಲ್ಲಿ 'ಕೇತಗೌಂಡ'ನಿಗೆ 'ಕೊವರ ಕೇತಗೌಂಡ' ಎಂದು ಕರೆದಿರಬಹುದೆಂದು ಊಹಿಸಬಹುದು.

ಹಾಗೆಯೇ ಹೊಯ್ಸಳರು ಭೌಗೋಳಿಕವಾಗಿ ವಿಸ್ತಾರವಾಗಿದ್ದ ರಾಜ್ಯವನ್ನು ಆಳ್ವಿಕೆಯ ಸೌಕರ್ಯಕ್ಕಾಗಿ ಮಂಡಲ, ನಾಡು, ಊರು ಎಂದು ಮೂರು ಭಾಗಗಳಾಗಿ ವಿಂಗಡಿಸಿದ್ದರು. ರಾಜಧಾನಿಯ ಸುತ್ತಮುತ್ತಲ ಭಾಗವನ್ನು ರಾಜನೇ ನೇರವಾಗಿ ಆಳುತ್ತಿದ್ದು, ಉಳಿದ ರಾಜ್ಯವನ್ನು ಮಂಡಲಗಳಾಗಿ ವಿಂಗಡಿಸಿ ಒಂದೊಂದು ಮಂಡಲಕ್ಕೂ 'ಮಂಡಲೇಶ್ವರ' ರನ್ನು ನೇಮಿಸುತ್ತಿದ್ದನು. ಒಂದೊಂದು ಮಂಡಲವನ್ನೂ ಮತ್ತೆ ಬೇರೆ ಬೇರೆ ನಾಡುಗಳಾಗಿ ವಿಂಗಡಿಸಿ ಆಯಾ ನಾಡಿಗೆ 'ನಾಡಗಾವುಂಡ' ರನ್ನು ನೇಮಿಸುತ್ತಿದ್ದರು. ಆಯಾ ಊರಿಗೆ ಮುಖ್ಯಸ್ಥನಾಗಿ 'ಪ್ರಭುಗಾವುಂಡ' ಅಥವಾ 'ಊರಗಾವುಂಡ'ನಿರುತ್ತಿದ್ದನು. ಈ ಹಿನ್ನೆಲೆಯಲ್ಲಿ ಶಾಸನದಲ್ಲಿ ಉಕ್ತವಾಗಿರುವ 'ಗೌಂಡ'/'ಗಾವುಂಡ' ಎಂಬ ಪದವು ಆಡಳಿತಾತ್ಮಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ.

ಈ ಶಾಸನದಲ್ಲಿ "ಆರಿದವಾಳಿಕೆಯ ಕೇತನಹಳಿಯಮಾಡಿ" ಎಂಬ ಮಾತು ಬಂದಿದೆ. ಆರಿದವಾಳಿಕೆಯು ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಗಂಗರು, ಕದಂಬರು, ಚೋಳರು, ಪುನ್ನಾಟದ ಅರಸರು, ಹೊಯ್ಸಳರ ಪ್ರಾಂತ್ಯಾಡಳಿತ ವಿಭಾಗಗಳಲ್ಲಿ ಒಂದಾಗಿತ್ತು. ಈ ವಿಭಾಗವು ಹೆಗ್ಗಡದೇವನಕೋಟೆ, ಹುಣಸೂರು ಮತ್ತು ಪಿರಿಯಾಪಟ್ಟಣ ತಾಲೂಕಿನ ಹಲವು ಹಳ್ಳಿಗಳನ್ನು ಒಳಗೊಂಡಿದ್ದಿರಬಹುದೆಂದು ಡಾ.ಚನ್ನಬಸವಯ್ಯ ಹಿರೇಮಠ ಅವರು ಅಭಿಪ್ರಾಯಪಡುತ್ತಾರೆ. ಹೆಗ್ಗಡದೇವನಕೋಟೆ ತಾಲೂಕಿನ ಕ್ಯಾತನಹಳ್ಳಿಯ ಈ ಶಾಸನವು ಆರಿದವಾಳಿಕೆಯ ವ್ಯಾಪ್ತಿಗೊಳಪಡುವ ಹಲವು ಗ್ರಾಮಗಳನ್ನು ಸೇರಿಸಿ ಕೇತಗೊಂಡನು ಕೇತನಹಳ್ಳಿಯನ್ನಾಗಿ ಮಾಡಿದ್ದನ್ನು ತಿಳಿಸುತ್ತದೆ.

ಕೇತಗೊಂಡನು ಮಲ್ಲಿನಾಥ ದೇವಾಲಯವನ್ನೂ ಒಂದು ಕೆರೆಯನ್ನೂ ಆತನ ಮಗ ಹೊಯ್ಸಳಗೌಂಡನು ಲಕ್ಷ್ಮೀನಾರಾಯಣ ದೇವರನ್ನೂ ಒಂದು ರಂಗಮಂಟಪವನ್ನೂ ನಿರ್ಮಿಸಿದನೆಂದು ಶಾಸನ ಹೇಳುತ್ತದೆ. ಇದರಿಂದ ಹೊಯ್ಸಳರು ಸರ್ವಧರ್ಮ ಸಹಿಷ್ಣುಗಳಾಗಿದ್ದು, ಶೈವ ಮತ್ತು ವೈಷ್ಣವ ಧರ್ಮಗಳೆರಡನ್ನು ತಮ್ಮ ಆಳ್ವಿಕೆಯ ಕಾಲದಲ್ಲಿ ಪೋಷಿಸಿದುದರ ಕುರುಹಾಗಿ ಮಲ್ಲಿನಾಥ ಮತ್ತು ಲಕ್ಷ್ಮೀನಾರಾಯಣ ದೇವಾಲಯವನ್ನು ಕಟ್ಟಿಸಿರುವಂತಹ ಮಹತ್ವದ ಅಂಶ ಬೆಳಕಿಗೆ ಬರುತ್ತದೆ. ಈಶ್ವರನನ್ನು ಮಲ್ಲಿನಾಥ, ಮಂಜುನಾಥ, ಮಲ್ಲಿಕಾರ್ಜುನ, ಗಂಗಾಧರ, ನಂಜುಂಡ, ಮಹಾಬಲ ಇವೇ ಮೊದಲಾದ ಹೆಸರುಗಳಿಂದ ಜನ ಕರೆಯುತ್ತಾರೆ. ಈ ಕಾರಣದಿಂದಲೇ ಇಂದು ಗ್ರಾಮದಲ್ಲಿ ಮಲ್ಲಿನಾಥ ದೇವಾಲಯವನ್ನು ಗಂಗಾಧರೇಶ್ವರ ದೇವಾಲಯವೆಂದು ಕರೆಯುತ್ತಾರೆ ಹಾಗೂ ಲಕ್ಷ್ಮೀನಾರಾಯಣ ದೇವರನ್ನು ಲಕ್ಷ್ಮೀಕಾಂತನೆಂದು

ಕರೆಯುವುದು ರೂಢಿಯಲ್ಲಿದೆ. ಒಟ್ಟಾರೆ ಈ ದೇವಾಲಯವು ಹರಿಹರರ ಅಭೇದ ಕಲ್ಪನೆಗೆ ಒಂದು ಉತ್ತಮ ನಿರ್ದರ್ಶನವಾಗಿದೆಯೆಂದೇ ಹೇಳಬಹುದು. ಹೀಗೆ ಈ ಶಾಸನವು ಅಂದಿನ ಧಾರ್ಮಿಕ ಮನೋಭಾವಗಳನ್ನು ನಿರೂಪಿಸುವ ಕುರುಹಾಗಿಯೂ ಕಂಡುಬರುತ್ತದೆ.

ಮತ್ತೊಂದು ಮಹತ್ವದ ಅಂಶವೆಂದರೆ ಈ ಶಾಸನವು ಅಂದಿನ ಸಾರ್ವಜನಿಕ ಕೆಲಸ ಕಾರ್ಯಗಳ ಮೇಲೂ ಬೆಳಕು ಚೆಲ್ಲುತ್ತದೆ. ಕೇತಗೊಂಡನು ಒಬ್ಬ ಪಾಳೆಯಗಾರನಾಗಿ ಕೆರೆಯನ್ನು ಕಟ್ಟಿಸಿ, ಬಾವಿಯನ್ನು ಸವೆಸಿ, ದೇವಾಲಯವನ್ನು ನಿರ್ಮಿಸಿರುವನೆಂದು ಶಾಸನ ಪಾಠವೇ ಹೇಳುತ್ತದೆ. ಈ ಎಲ್ಲಾ ಕೆಲಸಗಳು ದ್ರಾವಿಡ ಮೂಲ ಸಂಸ್ಕೃತಿಯ ಕುರುಹುಗಳು. ಕ್ರಿ.ಶ.1411 ರ ಹಂಪೆಯ ಶಾಸನದಲ್ಲಿ ಸಿಂಗಲೆ ಎಂಬುವವಳು ತನ್ನ ಮಗು ಲಕ್ಷ್ಮೀಧರನಿಗೆ ಹಾಲೆರೆಯುತ್ತಾ ಹೇಳುವ "ಕೆರೆಯಂ ಕಟ್ಟಿಸು ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯದಾತನಾಗು, ಸತ್ಪುರುಷರನ್ನು ರಕ್ಷಿಸು" ಎಂಬ ಮಾತುಗಳನ್ನು ಗಮನಿಸಿದಾಗ 12ನೇ ಶತಮಾನಕ್ಕಾಗಲೇ ಈ ಮಾತುಗಳನ್ನು ಚಾಚೂ ತಪ್ಪದೇ ಪರಿಪಾಲಿಸುತ್ತಿದ್ದಕ್ಕೆ ಕ್ಯಾತನಹಳ್ಳಿ ಶಾಸನವೇ ಸ್ಪಷ್ಟ ನಿದರ್ಶನ ಎನಿಸುತ್ತದೆ. ಇದು ಗ್ರಾಮ ಜೀವನದ ಚರಿತ್ರೆಯಲ್ಲಿ ಸರ್ವರಿಗೂ ಲೋಕೋಪಕಾರವೆಸಗುವ ಕಾಯಕವೇ ಆಗಿದೆ.

ಕೇತಗೊಂಡನಿಂದ ಮಲ್ಲಿನಾಥ ದೇವರು, ಹೊಯ್ಸಳಗೌಡನಿಂದ ಲಕ್ಷ್ಮೀನಾರಾಯಣ ದೇವರು ನಿರ್ಮಾಣವಾದರೂ ಪ್ರತಿಷ್ಠಾಪನೆಯಿಲ್ಲದೆ ಕೆಲವು ಕಾಲ ಕುಂಠಿತಗೊಂಡಿತು. ತದನಂತರ "ನೂಱಯ್ಯೆವತವೊಂಭತನೆಯ ದುಂದುಭಿ ಸಂವತ್ಸರದ ಮಾರ್ಗಸಿರ ಬಹುಳ ಏಕಾದಸಿ ಸನಿವಾರದಂದು" ಅಂದರೆ ಶಾಲಿವಾಹನ ಶಕ 159 ಕ್ಕೆ ಸರಿಹೊಂದುವ ಕ್ರಿ.ಶ.1322 ರಂದು ಚೋಳದೇವನ ಮಗ ಅಂಕಪ, ಮಾಚಿದೇವನ ಮಗ ಚೊಕಂಣ್ಣ, ಜೀಯಗೌಡನ ಮಗ ಅಂಕಪ, ಹೊಯ್ಸಗೌಂಡನ ಮಗ ದೇವಂಣ್ಣಗೊಳಗಾಗಿ ಸಮಸ್ತ ಪ್ರಭುಗಳೆಲ್ಲರೂ ಸೇರಿ ಲಕ್ಷ್ಮೀನಾರಾಯಣನನ್ನು ಪ್ರತಿಷ್ಠಾಪಿಸಿ ಗದ್ದೆ ಹೊಲಗಳನ್ನು ದಾನ ಬಿಟ್ಟು ಸೂರ್ಯ ದೇವರ ಹೆಸರಿನಲ್ಲಿ ಈ ಸ್ಥಳವನ್ನು ಧಾರಾಪೂರ್ವಕವಾಗಿ ಮಾಡಿಕೊಟ್ಟು ಶ್ರೀಕಾರ್ಯವನ್ನು ನೆರವೇರಿಸಿದರೆಂದು ಶಾಸನ ಹೇಳುತ್ತದೆ. ಈ ದೇವಾಲಯ ನಿರ್ಮಾಣ ಹಾಗೂ ಪ್ರತಿಷ್ಠಾಪನೆಯ ಕಾರ್ಯಕ್ಕಾಗಿ ಈ ಶಾಸನದಲ್ಲಿ ಉಕ್ತವಾಗಿರುವ ಹಲವು ಹೊಯ್ಸಳ ರಾಜರು ಶ್ರಮಿಸಿರುವುದು ಗಮನಕ್ಕೆ ಬರುತ್ತದೆ.

ಈ ಶಾಸನದಲ್ಲಿ 'ಗದೆ ಬೆದಲಂ ಬಿಟ್ಟು' ಎಂಬ ಮಾತಿದೆ. ಈ ಮಾತು ಅಂದಿನ ಕಾಲದ ವ್ಯವಸಾಯದ ರೀತಿನೀತಿಗಳ ಬಗ್ಗೆ ತಿಳಿಸುತ್ತದೆ. ವ್ಯವಸಾಯದ ಜಮೀನನ್ನು ದೇವಮಾತೃಕೆ ಮತ್ತು ನದೀಮಾತೃಕೆಗಳೆಂದು ಸ್ಥೂಲವಾಗಿ ವಿಂಗಡಿಸಬಹುದು. ಕೇವಲ ಮಳೆ ನೀರನ್ನೇ ಆಶ್ರಯಿಸಿ ಬೆಳೆಯುವ ಹೊಲಗಳು ದೇವಮಾತೃಕೆಗಳು, ನದಿ, ಕೆರೆ ಮುಂತಾದವುಗಳನ್ನು ಆಶ್ರಯಿಸಿರುವ ಹೊಲಗಳು ನದಿ ಮಾತೃಕೆಗಳು. ಈ ವಿಭಜನೆಯನ್ನೇ ಈ ಶಾಸನದಲ್ಲಿ ಬೆದಲಂ(ಬೆದ್ದಲೆ) ಮತ್ತು ಗದೆ (ಗದ್ದೆ)ಗಳೆಂದು ಕರೆದಿರುವುದು. ಕೆಲವು ಸಂದರ್ಭಗಳಲ್ಲಿ ಇವು ಬೆದ್ದಲೆ ಭೂಮಿಗಳಾದರೂ ಹೊಲದಲ್ಲಿಯೇ ನೀರು ನಿಲ್ಲುವಂತೆ ಕಟ್ಟೆಯನ್ನು ಕಟ್ಟಿ, ಮಳೆಯ ನೀರನ್ನು ಸಂಗ್ರಹಿಸಿ ಭತ್ತವನ್ನು ಬೆಳೆಯಬಹುದಾದ ತಾತ್ಕಾಲಿಕ ಗದ್ದೆಗಳನ್ನಾಗಿ ರೂಪಿಸಿರುತ್ತಾರೆ.

ಕಟ್ಟೆಯಿದ್ದರೆ ಅವು ಗದ್ದೆಗಳು; ಕಟ್ಟೆಯೊಡೆದರೆ ಅವು ಬೆದ್ದಲು ಭೂಮಿಗಳಾಗುತ್ತವೆ. ಹೀಗೆ ಈ ಶಾಸನ ವ್ಯವಸಾಯದ ಬಗೆಗಿನ ಸೂಕ್ಷ್ಮ ಪರಿಚಯವನ್ನು ಮಾಡಿಕೊಡುತ್ತದೆ.

"ಸೂರಿಯಾ ದೇವರಿಗೆ ಯಿ ಸ್ತಾನವನು ಧಾರಾಪೂರ್ಬ್ಬಂ ಮಾಡಿಕೊಟ್ಟು" ಎಂದು ಶಾಸನ ಪಾಠದಲ್ಲಿ ಉಕ್ತವಾಗಿದೆ. ರಾಜರು ಸೂರ್ಯ ದೇವರಿನ ಹೆಸರಿನಲ್ಲಿ ದಾನ ಕೊಟ್ಟಿದ್ದರ ಹಿಂದೆ ಮಹತ್ತರವಾದ ಒಂದು ಉದ್ದೇಶವಿರಬೇಕು. ಸೂರ್ಯನನ್ನು ಕುರಿತು ಸುಮಾರು ಹತ್ತು ಸೂಕ್ತಗಳಿವೆ. ಅಗ್ನಿಯಂತೆ ಅವನ ಭೌತ ಸ್ವರೂಪ ಬಹಳ ಸ್ಪಷ್ಟವಾದದ್ದು. ಸೂರ್ಯನ ಕಣ್ಣನ್ನು ಕೆಲವು ಸೂಕ್ತಗಳು ವರ್ಣಿಸುತ್ತವೆ. ಸೂರ್ಯನ ದೃಷ್ಟಿ ದೂರದೃಷ್ಟಿ, ಅವನದು ಎಲ್ಲವನ್ನು ನೋಡಬಲ್ಲ ಕಣ್ಣು. ಆದುದರಿಂದ ಅವನಿಗೆ ಎಲ್ಲರ ಸರಿತಪ್ಪುಗಳನ್ನು ತಿಳಿಯುವ ಸಾಮರ್ಥ್ಯವುಂಟು. ಈ ಕಾರಣಕ್ಕಾಗಿಯೇ ನ್ಯಾಯ ಅನ್ಯಾಯಗಳನ್ನು ತಿಳಿಯುವ ಸಾಮರ್ಥ್ಯವುಳ್ಳವನೂ ದೂರದೃಷ್ಟಿಯುಳ್ಳವನೂ ಸೃಷ್ಟಿ ಚೇತನನೂ ಚಿರಸ್ಥಾಯಿಯೂ ಆದ ಸೂರ್ಯದೇವರ ಹೆಸರಿನಲ್ಲಿ ದಾನ ಕೊಟ್ಟಿರುವುದಾಗಿ ಊಹಿಸಬಹುದು. ಈ ದೇವಾಲಯ ನಿರ್ಮಾಣದ ಸಮಯದಲ್ಲೇ ಸೂರ್ಯ ದೇವರ ಮೂರ್ತಿಶಿಲ್ಪವನ್ನು ಸುಂದರ ಕಲಾಶೈಲಿಯಿಂದ ಕೆತ್ತಿರುವುದು ಇದೆ.

ಇದೇ ದೇವಸ್ಥಾನದ ರಂಗಮಂಟಪದ ಆಗ್ನೇಯ ಕಂಬದ ಬುಡದಲ್ಲಿ ಹಾಕಿಸಿರುವ ಶಾಸನವು "ಶ್ರೀಮನು ಮಹಾಮೂವರು ರಾಯರ ಗಂಡ" ಎಂದು ಬಿರುದಾಂಕಿತನಾದ ಶ್ರೀಮತ್ ತಿಮ್ಮಣ್ಣನಾಯ್ಕರ ಮನೆಯ ಅಕ್ಕಸಾಲಿಯಾದ ಮಾರತಮ್ಮನು ಮಲ್ಲಿನಾಥ ದೇವರಿಗೆ ಒಂದು ಒಕ್ಕಲು, ಲಕ್ಷ್ಮೀನಾಥ ದೇವರಿಗೆ ಒಂದು ಒಕ್ಕಲು ಬಿಟ್ಟು ಕೊಟ್ಟನೆಂದು ದಾನದ ವಿಷಯವನ್ನು ಹೇಳುತ್ತದೆ. ಬ್ರಹ್ಮ ಶಿವನಲ್ಲಿ ಒಂದು ವಿಲಕ್ಷಣವಾದ ಹೇಳಿಕೆ ಇದೆ. ಅವನ ಪ್ರಕಾರ ಕ್ಷತ್ರಿಯನೇ ಭೂಮಿಗೆ ಒಡೆಯನಾದ್ದರಿಂದ ಕ್ಷತ್ರಿಯನೇ ತೀರ್ಥಂಕರನಾಗಿರುವುದರಿಂದ ಅವನೇ ಎಲ್ಲರಿಗಿಂತ ಶ್ರೇಷ್ಠ. ವರ್ತಕರೂ ದ್ವಿಜರೂ ಶೂದ್ರರೂ ಭೂಮಿಗೆ ಒಡೆಯರಲ್ಲದ್ದರಿಂದ ಅವರು ಕೊಟ್ಟ ದಾನ ಸಲ್ಲುವುದಿಲ್ಲ. ಈ ಮಾತನ್ನು ಆ ಕಾಲದ ರಾಜರು ಚಾಚೂ ತಪ್ಪದೇ ಪರಿಪಾಲಿಸುತ್ತಿದ್ದಂತೆ ಕಂಡುಬರುತ್ತದೆ. ತಿಮ್ಮಣ್ಣ ನಾಯಕನೂ ಒಬ್ಬ ಕ್ಷತ್ರಿಯನೆ. 14ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಆಳ್ವಿಕೆ ಮಾಡುತ್ತಿದ್ದ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ದೊರೆಗಳು "ಮೂವರು ರಾಯರ ಗಂಡ" ಎಂಬ ಬಿರುದನ್ನು ಧರಿಸಿದ್ದರು. ಕಾಲಾನಂತರದಲ್ಲಿ ವಿಜಯನಗರ ಸಾಮ್ರಾಜ್ಯದ ಸಾಮಂತರಾದ ಹೊಯ್ಸಳರ ಕೆಲವು ರಾಜರೂ ಇದೇ ಬಿರುದನ್ನು ಧರಿಸಿದ್ದರೆಂದು ಶಾಸನದಿಂದ ತಿಳಿದುಬರುತ್ತದೆ.

"ಯಿ ಧರ್ಮ್ಮವ ಅಳಿದವರು ಗೋವ ಕೊಂದವರು" ಎಂಬ ಶ್ಲೋಕವೊಂದನ್ನು ಈ ಶಾಸನವು ಸ್ಮೃತಿ ಪುರಾಣಗಳಿಂದ ಉದ್ಧರಿಸಿ ಕೊಟ್ಟಿದೆ. ಈ ಶ್ಲೋಕವು ದಾನವನ್ನು ಕಾಪಾಡಿದವರಿಗೆ ದೊರಕುವ ಶ್ರೇಯಸ್ಸು, ದಾನವನ್ನು ಅಪಹರಿಸಿದವರಿಗೆ ಒದಗುವ ಪಾಪಗಳು ಇವುಗಳನ್ನು ಹೇಳುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ದಾನ, ಧರ್ಮಕ್ಕೆ ಶ್ರೇಷ್ಠವಾದ ಸ್ಥಾನವನ್ನು ಕೊಡುತ್ತಿದ್ದರು ಎನಿಸುತ್ತದೆ. ಹಾಗಾಗಿ ಈ ಧರ್ಮವನ್ನು ಕೆಡಿಸಿದರೆ ಅಥವಾ ನಾಶಪಡಿಸಿದರೆ ಗೋವ ಕೊಂದ ಪಾಪಕ್ಕೆ ಗುರಿಯಾಗುವರೆಂದು ಎಚ್ಚರಿಸಿದಂತಿದೆ. "ಗೋವ ಕೊಲ್ವುದು" ಪಂಚಮಹಾಪಾತಕಗಳಲ್ಲಿ ಒಂದಾಗಿದ್ದು, ಶಿವಕೋಟ್ಯಾಚಾರ್ಯರು ತಮ್ಮ "ವಡ್ಡಾರಾಧನೆ"

ಗ್ರಂಥದಲ್ಲಿ ಐದು ಮಹಾಪಾತಕಗಳನ್ನು ಹೆಸರಿಸಿದ್ದಾರೆ. ಅವುಗಳೆಂದರೆ ಬಾಲವಧೆ, ಸ್ತ್ರೀವದೆ, ಗೋವಧೆ, ಬ್ರಾಹ್ಮಣವಧೆ ಮತ್ತು ಋಷಿವಧೆ.

ಇಂತಹ ಶ್ಲೋಕಗಳಿಂದ ಆ ಕಾಲದ ಕೆಲವು ಸಂಗತಿಗಳು ನಮಗೆ ಧ್ವನಿತವಾಗುತ್ತವೆ. ದಾನವನ್ನು ಕೊಟ್ಟವನು, ತಾನು ಕೊಟ್ಟ ದಾನ ದೊಡ್ಡದು ಎಂದು ಅನ್ಯರು ಭಾವಿಸಲಿ ಎನ್ನುವುದಕ್ಕಿಂತ, ತಾನು ಕೊಟ್ಟಿದ್ದು ಉಳಿಯಬೇಕು, ಬೆಳೆಯಬೇಕು ಎಂಬ ವಿಷಯದಲ್ಲಿ ಹೆಚ್ಚು ಆಸಕ್ತನಾಗಿದ್ದಂತೆ ಕಾಣಿಸುತ್ತದೆ. ಇದಕ್ಕಾಗಿ ಅವನು ದಾನವನ್ನು ಪಾಲಿಸಿದರೆ ಬರುವ ಫಲವನ್ನು ನಾಶಪಡಿಸಿದರೆ ಬರುವ ಪಾಪಗಳನ್ನು ಹೇಳಿರುವಂತೆ ಕಾಣಿಸುತ್ತದೆ. ಅಲ್ಲದೆ ಆ ಕಾಲದ ಜನಜೀವನವನ್ನು ಧರ್ಮಶಾಸ್ತ್ರಗಳು ನಿಯಂತ್ರಿಸುತ್ತಿದ್ದುದೂ ಇದರಿಂದ ಧ್ವನಿತವಾಗುತ್ತದೆ. ತಾವು ಸಾಧ್ಯವಾದಷ್ಟು ಧರ್ಮಶಾಸ್ತ್ರಗಳಿಗೆ ಸಮ್ಮತವಾದ ಮಾರ್ಗದಲ್ಲಿ ನಡೆಯಬೇಕೆಂಬ ಆದರ್ಶ ಆ ಕಾಲದ ಜನತೆಯಲ್ಲಿತ್ತೆಂದು ಭಾವಿಸಬಹುದು.

ಅಂತಿಮವಾಗಿ ಶಾಸನದ ಕೊನೆಯ ಸಾಲುಗಳು ಅಳಿಸಿಹೋಗಿರುವುದರಿಂದ ಅದನ್ನು ನಿಖರವಾಗಿ ಅರ್ಥೈಸಲು ಸಾಧ್ಯವಾಗುವುದಿಲ್ಲ. ದಾನಶಾಸನಗಳ ಅಂತ್ಯದಲ್ಲಿ ಸಾಮಾನ್ಯವಾಗಿ ಅದನ್ನು ಬರೆದ ಕೃತಿಕಾರ ಮತ್ತು ಅದನ್ನು ಕೆತ್ತಿದ ಶಿಲ್ಪಿಯ ಹೆಸರುಗಳು ಬರುತ್ತವೆ. ಈ ಶಾಸನದ ಅಂತ್ಯದಲ್ಲಿ ಅಕಸಾಲೆವಾಲು.... ಎಂಬ ಪದದ ಮುಂದಿನ ಅಕ್ಷರಗಳು ಅಳಿಸಿಹೋಗಿರುವುದರಿಂದ ಬಹುಶಃ ಅದನ್ನು ಕೆತ್ತಿದ ಶಿಲ್ಪಿಯ ಹೆಸರು ಬಿಟ್ಟು ಹೋಗಿರಬಹುದೆಂದು ಊಹಿಸಬಹುದು.

ಸಾಮಾನ್ಯವಾಗಿ ಶಾಸನಗಳನ್ನು ಕೊರೆಯುತ್ತಿದ್ದವರು ಶಿಲ್ಪಶಾಸ್ತ್ರದಲ್ಲಿ ಪ್ರವೀಣರಾದ ಶಿಲ್ಪಿಗಳೇ ಆದರೂ ಅಕ್ಕಸಾಲೆಗಳು ಕಮ್ಮಾರರೂ ಬಡಗಿಗಳೂ ಕಂಚುಗಾರರೂ ಶಾಸನಗಳನ್ನು ಕೆತ್ತುವ ಕೆಲಸವನ್ನು ನಿರ್ವಹಿಸುತ್ತಿದ್ದರೆಂದು ಊಹಿಸಲು ಕ್ಯಾತನಹಳ್ಳಿ ಶಾಸನದಲ್ಲಿ ಉಕ್ತವಾಗಿರುವ 'ಅಕ್ಕಸಾಲೆ', 'ಚನಿಗಾಟಿ' ಎಂಬ ಪದಗಳು ಪುಷ್ಟಿಕೊಡುತ್ತವೆ. ಹೀಗೆ ಈ ಶಾಸನವು ಕೇವಲ ದಾನದ ವಿಷಯವನ್ನು ಹೇಳದೆ ಆ ಕಾಲದ ಸಾಮಾಜಿಕ ವ್ಯವಸ್ಥೆಯ ಮೇಲೂ ಬೆಳಕು ಚೆಲ್ಲಿರುವುದನ್ನು ನೋಡಬಹುದು. 12ನೇ ಶತಮಾನದ ಹೊತ್ತಿಗೆ ವರ್ಣವ್ಯವಸ್ಥೆ ಸಡಿಲಗೊಂಡಂತೆ ವೃತ್ತಿ ಆಧಾರಿತ ಜಾತಿಗಳು ಹುಟ್ಟಿಕೊಂಡಿರಬಹುದು. ಆ ಕಾಲದಲ್ಲಿ ಬ್ರಾಹ್ಮಣರು, ಗೌಡರು, ನಾಯಕರು, ಅಗಸರು, ಅಕ್ಕಸಾಲಿಗಳು, ಬಡಗಿಗಳು, ಕಮ್ಮಾರರು, ಕ್ಷೌರಿಕರು, ಕುಂಬಾರರು, ಬಳೆಗಾರರು, ಹರಿಜನರು ತಮ್ಮ ತಮ್ಮ ವೃತ್ತಿಯನ್ನು ಆಧರಿಸಿಕೊಂಡು ಬದುಕುತ್ತಿದ್ದ ಇನ್ನೂ ಹಲವಾರು ಜಾತಿಯವರು ಇಂದಿಗೂ ಕೂಡ ಈ ಗ್ರಾಮದಲ್ಲಿ ನೆಲೆಸಿದ್ದಾರೆ. ಆದರೆ ತಮ್ಮ ಮೂಲವೃತ್ತಿಯೊಂದಿಗೆ ಸ್ವಲ್ಪ ಮಾರ್ಪಾಡುಗಳನ್ನು ಮಾಡಿಕೊಂಡು ವಿವಿಧ ಉಪಕಸುಬುಗಳಲ್ಲಿ ತೊಡಗಿಕೊಂಡಿರುವುದನ್ನು ಗಮನಿಸಬಹುದು.

ಒಟ್ಟಾರೆಯಾಗಿ ಕ್ಯಾತನಹಳ್ಳಿ ಲಕ್ಷ್ಮೀಕಾಂತ ದೇವಾಲಯದ ಈ ದಾನಶಾಸನವು 12ನೇ ಶತಮಾನದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದಂತಹ ಹೊಯ್ಸಳ ರಾಜಮನೆತನದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಒಂದು ಚಾರಿತ್ರಿಕ ಕುರುಹಾಗಿದೆ. ಅಲ್ಲದೆ ಅಂದಿನ ಭೌಗೋಳಿಕ ರೂಪುರೇಷೆ, ರಾಜಕೀಯ ವ್ಯವಸ್ಥೆ, ಆಡಳಿತಾತ್ಮಕ ವ್ಯವಸ್ಥೆ, ಜನತೆಯ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಕೋನಗಳು ಹಾಗೂ ಮನೋಭಾವನೆಗಳನ್ನು ತಿಳಿಯಲು ಈ ಶಾಸನವು ಅತ್ಯುಪಯುಕ್ತ ದಾಖಲೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- *ಎಪಿಗ್ರಾಫಿಯಾ ಕರ್ನಾಟಕ ಸಂಪುಟ–3.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಚಿದಾನಂದಮೂರ್ತಿ, ಎಂ. (1966). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150).* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ತಿಪ್ಪೇರುದ್ರಸ್ವಾಮಿ, ಎಚ್. (1968). ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ